**ಸಾಕ್ಷಿಯನ್ನು ದಿನಾಂಕ 24-04-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ ಅರ್ಜಿದಾರರ ಪರ ವಕೀಲರಿಂದ (ನ್ಯಾಯಾಲಯದ ಆದೇಶದ ಮೇರೆಗೆ ):**

| | | |
|---|---|---|
| In patient final bill | ನಿಪಿ-20 | ಎಂದು ಗುರುತಿಸಲಾಯಿತು. |
| Advance receipt | ನಿಪಿ-21 | ಎಂದು ಗುರುತಿಸಲಾಯಿತು. |
| Advance receipt | ನಿಪಿ-22 | ಎಂದು ಗುರುತಿಸಲಾಯಿತು. |
| In patient bill of supply | ನಿಪಿ-23 | ಎಂದು ಗುರುತಿಸಲಾಯಿತು. |

**ಪಾಟೀಸವಾಲು- 3 ನೇ ಎದುರುದಾರರ ಪರ ಶ್ರೀ ಕೆ.ಜಿ.ಆರ್ ವಕೀಲರಿಂದಃ**

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಬಿಲ್ಲುಗಳಷ್ಟು ಖರ್ಚು ನನಗೆ ಆಗಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ತಡವಾಗಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಗ್ಯವಾಗಿದ್ದ ಕಾರಣ ಬಿಲ್ಲಿನಲ್ಲಿ ಬರೆದಂತಹ ಯಾವುದೇ ಔಷಧಿಗಳನ್ನು ನಾನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

ನಾನು ಮೊದಲಿನಂತೆ ಆರೋಗ್ಯವಾಗಿದ್ದೇನೆ ಎಂದರೆ ಸಾಕ್ಷಿ ಅಪಘಾತ ಸಂದರ್ಭದಲ್ಲಿ ನನಗೆ ಆಗುತ್ತಿರಲಿಲ್ಲ ಆದರೆ ಈಗ ಆರೋಗ್ಯವಾಗಿದ್ದೇನೆ ಎಂದು ನುಡಿಯುತ್ತಾರೆ. ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ಹೇಳುತ್ತೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ದಾಖಲಾದ ದಿನ ಹಾಗೂ ಬಿಡುಗಡೆ ಆದ ದಿನ ಒಂದೇ ಆದ ಕಾರಣ ನಿಪಿ-20 ರಿಂದ ನಿಪಿ-23 ರ ಬಿಲ್ಲುಗಳನ್ನು ನಾನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು-1 ಮತ್ತು 2 ನೇ ಎದುರುದಾರರ ಪರ ಶ್ರೀ ಎನ್.ಜಿ.ಎ ವಕೀಲರಿಂದಃ</u>**

1 ಮತ್ತು 2 ನೇ ಎದುರುದಾರರ ಪರ ವಕೀಲರು ನ್ಯಾಯಾಲಯದಲ್ಲಿ ಗೈರುಹಾಜರಾಗಿದ್ದು, ಅವರ ಪರ ಪ್ರಾತಿನಿಧ್ಯ ಇಲ್ಲದ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀಸವಾಲು-4 ನೇ ಎದುರುದಾರರ ಪರ ಶ್ರೀ ಎಮ್.ಇ.ಎಮ್ ವಕೀಲರಿಂದಃ</u>**

4 ನೇ ಎದುರುದಾರರ ಪರ ವಕೀಲರು ನ್ಯಾಯಾಲಯದಲ್ಲಿ ಗೈರುಹಾಜರಾಗಿದ್ದು, ಅವರ ಪರ ಪ್ರಾತಿನಿಧ್ಯ ಇಲ್ಲದ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ಕೊಡಗು-ಮಡಿಕೇರಿ.